

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಆಸ್ತಿಗೊಬ್ಬ ಮಗ, ಆಸರೆಗೊಬ್ಬ ಮಗಳು?....

ಮದುವೆ ಮಂಟಪದಲ್ಲಿ ನವವಧುವನ್ನು 'ದೀರ್ಘಸುಮಂಗಲೀ ಭವ' ಎಂದೋ 'ಅಷ್ಟಪುತ್ರವತೀ ಭವ' ಎಂದೋ ಹಿರಿಯರು ಆಶೀರ್ವದಿಸುವುದು ನಮ್ಮ ನಾಡಿನಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ಇದರಲ್ಲಿ 'ದೀರ್ಘಕಾಲ ಸುಮಂಗಲೆಯಾಗಿರು' ಎಂದು ಹರಸುವುದು ಸರಿ. ಆದರೆ 'ಎಂಟು ಮಕ್ಕಳ ತಾಯಿಯಾಗು' ಎಂದು ಹರಸುವುದು ಈಗಿನ ಕಾಲದಲ್ಲಿ ಎಷ್ಟರಮಟ್ಟಿಗೆ ಸರಿ? 'ಮಕ್ಕಳಿರಲವ್ವ ಮನೆತುಂಬ' ಎಂದು ಹೇಳಿದ ಪ್ರಾಚೀನ ಜನಪದರ ಕಾಲಕ್ಕೂ, ಆಧುನಿಕ ನವನಾಗರೀಕತೆಯ ಕಾಲಕ್ಕೂ ವ್ಯತ್ಯಾಸವಿದೆಯಲ್ಲವೇ? ಮಕ್ಕಳು ಹುಟ್ಟುವ ಮೊದಲೇ ಹತ್ತಾರು ಸಾವಿರ ರೂಪಾಯಿ ಡೊನೇಷನ್ ಕೊಟ್ಟು ಕಾನ್ವೆಂಟ್‌ಶಾಲೆಯಲ್ಲಿ ಸೀಟು ಕಾಯ್ದಿರಿಸಬೇಕಾದ ಇಂದಿನ ದುಬಾರಿ ಶಿಕ್ಷಣದ ಕಾಲದಲ್ಲಿ ಇದು ಅಪೇಕ್ಷಣೀಯವೇ? ಮುಂದೆ ವೃತ್ತಿಪರ ಕಾಲೇಜುಗಳಾದ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಕೊಡಬೇಕಾದ ಲಕ್ಷಾಂತರ ರೂಪಾಯಿ ಫೀಜನ್ನು ನೆನೆಸಿಕೊಂಡರೆ ಈ ರೀತಿ ಹರಸುವುದು ಆಶೀರ್ವಾದವಾಗಬಲ್ಲುದೇ? ಮದುವೆ ಸಂದರ್ಭದಲ್ಲಿ ಮದುಮಕ್ಕಳಿಗೆ ಅಕ್ಷತಾರೋಪಣ ಮಾಡಿಸುವ ಸಂದರ್ಭದಲ್ಲಿ ಪುರೋಹಿತರು ಹೇಳುವ ಪ್ರಸಿದ್ಧವಾದ ಮಂತ್ರದ ಒಂದು ಸಾಲು ಹೀಗಿದೆ: 'ಧನಂ ಧಾನ್ಯಂ ಪಶುಂ ಬಹುಪುತ್ರಲಾಭಂ!' ಬಹಳ ವರ್ಷಗಳ ಹಿಂದೆಯೇ ನಮ್ಮ ಲಿಂಗೈಕ್ಯ ಗುರುವರ್ಯರು ಪುರೋಹಿತರ ಕಿವಿಹಿಂಡಿ ಈ ಮಂತ್ರದಲ್ಲಿರುವ 'ಬಹುಪುತ್ರಲಾಭಂ' ಎಂಬ ಪದಪುಂಜವನ್ನು ಛಂದೋಭಂಗವಾಗದಂತೆ ಬದಲಾಯಿಸಿ 'ಬಹುಮಿತ್ರಲಾಭಂ' ಎಂದು ಹೇಳಬೇಕೆಂದು ಆಜ್ಞಾಪಿಸಿದ್ದನ್ನು ಈಗಲೂ ನಮ್ಮ ಮಠದ ಪುರೋಹಿತರು ಪಾಲಿಸುತ್ತಾ ಬಂದಿದ್ದಾರೆ. 'ಬಹಳ ಜನ ಮಕ್ಕಳಾಗಲಿ' ಎನ್ನುವುದಕ್ಕಿಂತ 'ಬಹಳ ಜನ ಸ್ನೇಹಿತರಾಗಲಿ' ಎಂದು ಆಶಿಸುವುದು ಇಂದಿನ ಕಾಲಮಾನಕ್ಕೆ ತಕ್ಕುದಾಗಿದೆ. ಮದುವೆ ಮಂಟಪದಲ್ಲಿ ನವದಂಪತಿಗಳನ್ನು ಹರಸಲು ಪುರೋಹಿತರು ಪಠಿಸುವ ಮತ್ತೊಂದು ಮುಖ್ಯವಾದ ಮಂತ್ರವೆಂದರೆ 'ಬಹುಗ್ವೈ, ಬಹ್ವಶ್ವಾಯೈ......ಬಹು ಹಸ್ತಿಕಾಯೈ!' ಯಜುರ್ವೇದದಲ್ಲಿ ಬರುವ ಈ ಮಂತ್ರದ ಆಶಯ 'ದೇವರು ನಿಮಗೆ ತುಂಬಾ ಹಸುಗಳನ್ನು, ಕುದುರೆಗಳನ್ನು, ಆನೆಗಳನ್ನು ನೀಡಲಿ' ಎಂದು. ಹಸುಗಳೇನೋ ಸರಿ, ನಿತ್ಯ ಮನೆಯಲ್ಲಿ ಹಾಲಿನ ಹೊಳೆ ಹರಿದರೆ ಮನೆಮಂದಿಗೆಲ್ಲಾ ಆರೋಗ್ಯಕ್ಕೆ ಒಳ್ಳೆಯದು. ಹೊಸಮನೆಯನ್ನು ಪ್ರವೇಶಿಸುವಾಗ ಹಾಲು ಉಕ್ಕಿಸುತ್ತಾರಲ್ಲವೇ? ಆದರೆ ಮಂತ್ರದಲ್ಲಿ ಅನುಗ್ರಹಿಸಿದಂತೆ ಈ ಕುದುರೆ, ಆನೆ, ಒಂಟೆಗಳನ್ನು ತೆಗೆದುಕೊಂಡು ಗೃಹಸ್ಥರು ಏನು ಮಾಡಬೇಕಾಗಿದೆ? ಅಪಾರ ಶಿಷ್ಯರನ್ನು ಹೊಂದಿರುವ ಮಠದ ಸ್ವಾಮಿಗಳೇ ಮಠದಲ್ಲಿರುವ ಒಂದು ಆನೆಯನ್ನು ಸಾಕಲು ಕಷ್ಟಪಡುವಾಗ ಗೃಹಸ್ಥರು ಆನೆಯ ಕಾಲಿನಿಂದ ತುಳಿಸಿಕೊಂಡು ಕೈಲಾಸ ಸೇರಬೇಕಷ್ಟೆ! ಅಥವಾ ಕುದುರೆ ಜೂಜು ಆಡಿ ದಿವಾಳಿಯಾಗಬೇಕು. ಈಗಿನ ನವದಂಪತಿಗಳಿಗೆ ಬೇಕಾಗಿರುವುದು ಕುದುರೆ ಆನೆಗಳಿಗಿಂತ ಹೆಚ್ಚಾಗಿ ಮೋಟಾರು ಕಾರು ಮತ್ತು ಬೈಕು. ಇವು ಮಂತ್ರವನ್ನು ಬದಲಾಯಿಸದಿದ್ದರೂ ಆಧುನಿಕ ವರಮಹಾಶಯರ ಕೃಪೆಯಿಂದ ವರದಕ್ಷಿಣೆಯ ಪಟ್ಟಿಯಲ್ಲಿ ಈಗಾಗಲೇ ಸೇರ್ಪಡೆಯಾಗಿವೆ. ಜನಸಂಖ್ಯೆಯಿಂದ ತತ್ತರಿಸುತ್ತಿರುವ ಈ ನಾಡಿಗೆ ಮೇಲೆ ಉದ್ಧರಿಸಿದ ಮಂತ್ರಗಳು ಎಷ್ಟೇ ಸದಾಶಯದಿಂದ ಕೂಡಿದ್ದರೂ ವಿಚಾರವಂತರ ದೃಷ್ಟಿಯಲ್ಲಿ ಕೌಟುಂಬಿಕ ಜೀವನ ಮತ್ತು ರಾಷ್ಟ್ರಜೀವನಕ್ಕೆ ಹಾಕುವ ಹಿಡಿಶಾಪ ಎನಿಸದಿರಲಾರದು! ಮಂತ್ರದ ಆಶಯದಂತೆ ಹುಟ್ಟಿದ ಆ ಎಂಟು ಮಕ್ಕಳು ಒಂದು ಪಕ್ಷ ಗಂಡುಮಕ್ಕಳಾದರಂತೂ ಮುಗಿದೇ ಹೋಯಿತು. ಅವರು ಬೆಳೆದು ದೊಡ್ಡವರಾದ ಮೇಲೆ ಮನೆಯಲ್ಲಿ ಒಂದು ದೊಡ್ಡ ಕುರುಕ್ಷೇತ್ರವೇ ಆರಂಭವಾಗುತ್ತದೆ. ಹುಟ್ಟುತ್ತಾ ಅಣ್ಣತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು ಎಂಬ ಗಾದೆ ಮಾತು ನಿಮಗೆ ತಿಳಿದೇ ಇದೆ.

ಎಷ್ಟೋ ಜನ ರೈತರಿಗೆ ತಮಗೆ ಮಕ್ಕಳೆಷ್ಟು ಎಂದು ಖಚಿತವಾಗಿ ಗೊತ್ತೇ ಇರುವುದಿಲ್ಲ. ಹಳ್ಳಿಗಳಲ್ಲಿ ಶಿಷ್ಯರ ಮನೆಗೆ ಹೋದಾಗ ಪೂಜೆಯಾದ ಮೇಲೆ ಲೋಕಾಭಿರಾಮವಾಗಿ ಮಾತನಾಡುತ್ತಾ 'ಎಷ್ಟು ಜನ ಮಕ್ಕಳಿದ್ದಾರೆ?' ಎಂದು ಕೇಳಿದರೆ ಮನೆಯ ಯಜಮಾನನಿಗೆ ಸರಿಯಾಗಿ ನೆನಪಿರುವುದಿಲ್ಲ. ತಡವರಿಸಿ 'ಒಂದು

ನಾಕು ಇದಾವ್ರಿ' ಎಂದು ಅಂದಾಜಿನ ಮೇಲೆ ಹೇಳುತ್ತಾನೆ. ಹೊಲದಲ್ಲಿ ಈ ವರ್ಷ ಬೇಸಿಗೆ ಬೆಳೆ ಎಕರೆಗೆ ಒಂದು ನಾಲ್ಕು ಚೀಲ ಆಯಿತು ಎಂದು ಹೇಳಿದಂತೆ! ತಾಯ್ತನದ ನೋವನ್ನು ಅನುಭವಿಸಿದ ಅವನ ಮಡದಿ ಸಂಕೋಚದಿಂದ ಮೆಲುದನಿಯಲ್ಲಿ "ಐದನೆಯ ಮಗಳು 'ಪಾರು' ಇದ್ದಾಳ್ರಿ" ಎಂದು ಗಂಡನ ಕಡೆ ಹುಬ್ಬುಗಂಟಿಕ್ಕಿ ನೋಡುತ್ತಾಳೆ. ಇದೇ ರೀತಿ 'ಮಕ್ಕಳು ಏನು ಓದುತ್ತಿದ್ದಾರೆ?' ಎಂದು ಕೇಳಿದರೆ ತಂದೆ ನಮ್ಮ ಎದುರಿಗೇನೆ ಮಗನನ್ನು 'ಏನೋ, ಏನು ಓದ್ತೀಯೋ?' ಎಂದು ಕೇಳುತ್ತಾನೆ. ಮಕ್ಕಳ ಶಿಕ್ಷಣದ ಬಗ್ಗೆ ಇಷ್ಟು ಅನಾದರಣೆ ಇದ್ದರೆ ದೇಶದ ಗತಿ ಏನು?

ಭಾರತೀಯ ಮಹಿಳೆಯರಿಗೆ ತಾಯಿ ಎನಿಸಿಕೊಳ್ಳಬೇಕೆಂಬ ಹಂಬಲ ಬಹಳ. ಮಕ್ಕಳಿಲ್ಲದ ಮಹಿಳೆಯರು ದೇವರಿಗೆ ಹರಕೆ ಹಾಕಿಕೊಳ್ಳುತ್ತಾರೆ. ವ್ರತಗಳನ್ನು ಆಚರಿಸುತ್ತಾರೆ. ಯಾರಾದರೂ 'ಬಂಜೆ' ಎಂದರೆ ಆಕೆಗೆ ಶೂಲಕ್ಕೆ ಏರಿಸಿದಂತಾಗುತ್ತದೆ. ಮಕ್ಕಳಿಲ್ಲದ ಮಹಿಳೆಯರ ಪರಿತಾಪವನ್ನು ಅನೇಕ ಜನಪದಗೀತೆಗಳಲ್ಲಿ ಮನಗಾಣಬಹುದು:

**ಬಾಲಕರಿಲ್ಲದ ಬಾಳೀದ್ಯಾತರ ಜನ್ಮ**
**ಬಾಡೀಗಿ ಎತ್ತು ದುಡಿದ್ಹಂಗ । ಬಾಳೆಲೆಯ**
**ಹಾಸುಂಡು ಬೀಸಿ ಒಗೆದಂಗ ॥**

**ಕಂದನ ಕೊಡು ಶಿವನೆ ಬಂಧನ ಪಡಲಾರೆ**
**ಹಂಗೀನ ಬಾನ ಉಣಲಾರೆ । ಮರ್ತ್ಯದಾಗ**
**ಬಂಜೆಂಬು ಶಬುದ ಹೊರಲಾರೆ ॥**

ದೇವರ ಕೃಪೆಯಿಂದ ತಾಯಿಯಾದರೂ ಹೆಣ್ಣು ಮಗು ಜನಿಸಿದರೆ ಅದೂ ತಾಯಂದಿರಿಗೆ ಅತೃಪ್ತಿ. ಮುಂದೆ ಗಂಡಾಗಬಹುದೆಂಬ ಆಶಾಭಾವನೆಯಿಂದ ಕಂಡ ಕಂಡ ದೇವರಿಗೆಲ್ಲ ದಿಂಡುರುಳು ಹಾಕಿ ಮುಂದೊಂದು ದಿನ ಗಂಡು ಹುಟ್ಟುವುದರೊಳಗೆ ಹತ್ತಾರು ಹೆಣ್ಣು ಬೆಳೆದು ನಿಂತಿರುತ್ತವೆ. ಧೃತರಾಷ್ಟ್ರನ ಪಟ್ಟದ ರಾಣಿ ಗಾಂಧಾರಿಯಂತೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡರೆ ಆಗುವುದೇ ಹೀಗೆ. ಅಷ್ಟೊಂದು ಮಕ್ಕಳನ್ನು ಸಲಹಲು ಗಾಂಧಾರಿಯಂತೆ ತಾನು ಯಾವುದೇ ರಾಜ್ಯದ ಪಟ್ಟದ ರಾಣಿಯಲ್ಲ ಎಂಬುದನ್ನು ತಾಯಂದಿರು ತಿಳಿದುಕೊಳ್ಳಬೇಕು. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ?' ಎಂಬ ಒಣ ವೇದಾಂತವನ್ನು ಬಿಡಬೇಕು.

ವೈದ್ಯಕೀಯ ವಿಜ್ಞಾನ ಮುಂದುವರಿದಂತೆ ಕೆಲವೊಂದು ಕೌಟುಂಬಿಕ ಮತ್ತು ಸಾಮಾಜಿಕ ಸಮಸ್ಯೆಗಳು ಹೆಚ್ಚಿವೆ. ಅವುಗಳಲ್ಲಿ ಹೊಟ್ಟೆಯೊಳಗಿರುವ ಕೂಸಿನ ಲಿಂಗಪರೀಕ್ಷೆ ಒಂದು. ಇದು ಅವಿದ್ಯಾವಂತ ಮಹಿಳೆಯರಿಗಿಂತ ವಿದ್ಯಾವಂತ ಮಹಿಳೆಯರಲ್ಲೇ ಹೆಚ್ಚು. ಜಗತ್ತಿನಲ್ಲಿ ಸ್ತ್ರೀಭ್ರೂಣಹತ್ಯೆಯಾಗುತ್ತಿರುವುದು ಚೀನಾ ದೇಶವನ್ನು ಬಿಟ್ಟರೆ ಭಾರತದಲ್ಲಿಯೇ ಜಾಸ್ತಿ ಎಂದು ಒಂದು ಸಮೀಕ್ಷೆ ಹೇಳುತ್ತದೆ. ವಿಶ್ವರಾಷ್ಟ್ರಸಂಸ್ಥೆ ಒದಗಿಸಿರುವ ಅಂಕಿಸಂಖ್ಯೆಗಳ ಪ್ರಕಾರ ಭಾರತದಲ್ಲಿ 2007ನೇ ಇಸವಿಯಲ್ಲಿ ದಿನಕ್ಕೆ ಎರಡು ಸಾವಿರದಂತೆ ಅಂದರೆ ಇಡೀ ವರ್ಷ ಒಟ್ಟು 7,30,000 ಹೆಂಗೂಸುಗಳು ತಾಯಗರ್ಭದಲ್ಲಿದ್ದಾಗಲೇ ಕೊಲೆಯಾಗಿವೆ. ಇಂತಹ ಮಾರಣಹೋಮದ ವಿರುದ್ಧ ಜನಜಾಗೃತಿ ಆಗಬೇಕಾಗಿದೆ. 'ಅಪುತ್ರಸ್ಯ ಗತಿರ್ನಾಸ್ತಿ' ಎಂದು ಸ್ವರ್ಗದಲ್ಲಿರುವ ಪಿತೃಗಳಿಗೆ ತರ್ಪಣ ಕೊಡಲು ಗಂಡುಮಗನೇ ಆಗಬೇಕೆಂದು ಹೊಟ್ಟೆಯಲ್ಲಿರುವ ಏನೂ ಅರಿಯದ ಹೆಂಗೂಸಿಗೆ ಹುಟ್ಟುವ ಮೊದಲೇ ಎಳ್ಳುನೀರು ಬಿಡುವುದು ಅಮಾನವೀಯ. ಒಬ್ಬ ಅಸಹಾಯಕ ತಾಯಿಯ ಕರುಳಿನ ಕುಡಿಯ ಕಾಲ್ಪನಿಕ ರೋದನವನ್ನು ಕುರಿತು ಅಂತರಜಾಲದಲ್ಲಿ ಪ್ರಚಲಿತವಾಗಿರುವ ಒಂದು ಮನಮಿಡಿಯುವ ವಿದ್ಯುನ್ಮಾನ ಪತ್ರವಿದೆ. ಅದನ್ನು ನಾವು ಕನ್ನಡದಲ್ಲಿ ಪದ್ಯರೂಪದಲ್ಲಿ ಭಾವಾನುವಾದ ಮಾಡಿದ್ದು, ಹೀಗಿದೆ:

**ಅಮ್ಮಾ! ನಾನಿನ್ನ ಮುದ್ದಿನ ಮಗಳಾಗಬಯಸಿದ್ದೆ,**
**ಅದಾವ ಜನ್ಮದ ಸಂಬಂಧವೋ ನಾ ಕಾಣೆ**
**ನಿನ್ನೊಡಲೊಳಗೆ ಕುಳಿತು ಹಾಯಾಗಿದ್ದೆ**
**ನಿನ್ನ ಮುಖವ ನೋಡಲು ತವಕಿಸುತಲಿದ್ದೆ.**

**ಕತ್ತಲಲ್ಲಿ ತಡಕಾಡಿದರೂ ಬೆಚ್ಚನೆಯ ನಿನ್ನುದರದೊಳಗೆ**
**ಸದಾಕಾಲ ಚಿಂತಿಸುತ ನಿದ್ರಿಸುತಲಿದ್ದೆ**
**ಕತ್ತಲಾಗೂಡಿಂದ ಬೆಳಕಿನೆಡೆಗೆ**
**ಹೊರಬರಲು ಅನುದಿನವು ಕನವರಿಸುತ್ತಲಿದ್ದೆ!**

**ಆಗಾಗ ನೀನಳುವುದು ಕೇಳುತಲಿತ್ತು ನನಗೆ**
**ಏಕೆ ಅಳುತಿರುವೆಯೆಂದು ಏನೂ ತಿಳಿಯದೆ**
**ಸುರಿವ ನಿನ್ನ ಕಣ್ಣೀರ ಒರೆಸಲಾಗದೆ**

**ಅಳುತಲಿದ್ದೆ ನಾನೂ ನಿನ್ನೊಟ್ಟಿಗೆ.**

**ಅಪ್ಪ ಬಯ್ದಾಗಲೆಲ್ಲ ನೀನನುಭವಿಸಿದಾ ಬವಣೆ**
**ನೋಡಿ ನನಗಾಗಿತ್ತು ಅಸಹನೆ, ವೇದನೆ!**
**ಎಲ್ಲ ಸರಿಹೋಗುವುದೆಂದು ನಾ ತಿಳಿದಿದ್ದೆ....**
**ಏಕೆ ಹೀಗಾಗುತಿದೆ ನಿಮ್ಮಿಬ್ಬರ ಮಧ್ಯೆ ಘರ್ಷಣೆ?**

**ನಿನ್ನೆಯಿಂದ ಒಂದೇ ಸಮನೆ ನೀನಳುತಲಿರುವೆ**
**ಏನಾಯಿತೆಂದು ನಾನಿನ್ನ ಕೇಳಿ ತಿಳಿಯುವುದರೊಳಗೆ**
**ಬಂದನದೋ ರಕ್ಕಸ ರಭಸದಿಂ ನನ್ನೆಡೆಗೆ**
**'ನಿಷ್ಕರುಣಿ ಪಾಪಿ ಹೋಗೆಲವೋ ಬೇರೆಡೆಗೆ'!**

**ಮುರಿದನಾ ಕ್ರೂರಿ ಕೈಕಾಲುಗಳ ಲಟಲಟನೆ**
**ಒದ್ದಾಡುತಿರುವೆ ನಿನ್ನುದರದೊಳಗೆ ವಿಲವಿಲನೆ**
**ಅಯ್ಯೋ ಸೈರಿಸಲಾರೆ ಈ ನರಕಯಾತನೆ**
**ಅಮ್ಮಾ ಕೇಳದೆ ನಿನಗೆ ನನ್ನೀ ವೇದನೆ?**

**ನಿನ್ನನೊಮ್ಮೆ ಕಣ್ತುಂಬ ನೋಡುವ ಮುನ್ನವೆ**
**ನಿನ್ನ ಮಡಿಲೊಳಗೆ ಅರೆಗಳಿಗೆ ಸುಖನಿದ್ರೆ ಮಾಡುವ ಮುನ್ನವೆ**
**ನಿನ್ನ ಬಿಗಿದಪ್ಪಿ ಕಿವಿಯೊಳಗೆ 'ಅಮ್ಮಾ' ಎಂದು ಉಸುರುವ ಮುನ್ನವೆ**
**ಏಕೀ ಕ್ರೂರ ಶಿಕ್ಷೆ ನನಗೆ ಹುಟ್ಟುವ ಮುನ್ನವೆ?**

**ನಿನ್ನ ಎದೆಹಾಲ ಸವಿಯುವ ಭಾಗ್ಯವಿಲ್ಲವೆನಗೆ**
**ನಿನ್ನ ಜೋಗುಳವ ಕೇಳುವ ಪುಣ್ಯವಿಲ್ಲವೆನಗೆ**
**ಭೂತಪ್ರೇತಗಳ ಮಸಣವೇ ತೊಟ್ಟಿಲೆನಗೆ**
**ಅಮ್ಮಾ ಉಸಿರುಗಟ್ಟುತಿದೆ... ಹೋಗಿಬರುವೆ, ನೀನಾದರೂ ಜೋಕೆ!**

ಮಗು ಹುಟ್ಟಿದಾಗ ಗಂಡಾಗಿದ್ದರೆ ಗಂಗಾಳ ಬಡಿಯುವುದು, ಹೆಣ್ಣಾಗಿದ್ದರೆ ಚಿಬ್ಬಲು ಬಡಿಯುವುದು ಹಳ್ಳಿಗಳಲ್ಲಿ ವಾಡಿಕೆ ಇದೆ. ಪಕ್ಕದ ಮನೆಗೆ ಕೇಳದಂತೆ ಚಿಬ್ಬಲು ಬಡಿಸಿಕೊಂಡು ಹುಟ್ಟಿದ ಹೆಣ್ಣುಮಕ್ಕಳ ಕತೆ ಒಂದು ತೆರನಾದರೆ, ಊರೆಲ್ಲಾ ಕೇಳುವಂತೆ ಗಂಗಾಳ ಬಡಿಸಿಕೊಂಡು ಹುಟ್ಟಿದ ಗಂಡುಗಳ ಕತೆ ಮತ್ತೊಂದು ತೆರನಾಗಿದೆ:

ಒಮ್ಮೆ ಸುಮಾರು 85 ವರ್ಷದ ಹಿರಿಯ ವಯಸ್ಸಿನ ಯಜಮಾನರೊಬ್ಬರು ನಮ್ಮ 'ಸದ್ಧರ್ಮ ನ್ಯಾಯಪೀಠ'ದ ಮುಂದೆ ಅರ್ಜಿದಾರರಾಗಿ ಹಾಜರಾದರು. ಮಠದೊಂದಿಗೆ ಆತ್ಮೀಯ ಒಡನಾಟ ಉಳ್ಳವರು. ತುಂಬಾ ಸ್ಥಿತಿವಂತರು ಮತ್ತು ಸುಸಂಸ್ಕೃತ ಮನೆತನದವರು. ಹಳ್ಳಿಗಳಲ್ಲಿ ಜನರಿಗೆ ತಿಳಿಹೇಳುವ ವರ್ಚಸ್ಸಿನ ವ್ಯಕ್ತಿತ್ವ ಉಳ್ಳವರು. ಆದರೆ ಅವರ ಮಾತನ್ನು ಮಕ್ಕಳೇ ಕೇಳುವ ಸ್ಥಿತಿಯಲ್ಲಿರಲಿಲ್ಲ. ಅವರಿಗೆ ನಾಲ್ಕು ಜನ ಗಂಡು ಮಕ್ಕಳು, ಆರು ಜನ ಹೆಣ್ಣುಮಕ್ಕಳು. ಹೆಣ್ಣುಮಕ್ಕಳನ್ನೆಲ್ಲ ಒಳ್ಳೊಳ್ಳೆಯ ಹುದ್ದೆಯಲ್ಲಿರುವ ಅಳಿಯಂದಿರಿಗೆ ಮದುವೆ ಮಾಡಿ ಕೊಟ್ಟಿದ್ದಾರೆ. ಆದರೆ ಸಮಸ್ಯೆ ಇದ್ದುದು ಗಂಡುಮಕ್ಕಳಲ್ಲಿ. ಕಷ್ಟಪಟ್ಟು ದುಡಿದು ಸಂಪಾದಿಸಿದ ದೊಡ್ಡ ಆಸ್ತಿ. ಮಕ್ಕಳಿಗೆ ಪಾಲುವಿಭಾಗ ಮಾಡಿಕೊಡಲು ಎಷ್ಟೇ ಪ್ರಯತ್ನಮಾಡಿದರೂ ಎರಡನೆಯ ಮಗ ಸರಿಯಿಲ್ಲವೆಂದು ಪಾಲುಪಟ್ಟಿಯನ್ನು ಹರಿದು ಹಾಕುತ್ತಿದ್ದ. 'ಬುದ್ದಿ! ಹೇಗಾದರೂ ಮಾಡಿ ತಾವು ಮಕ್ಕಳಿಗೆ ನನ್ನ ಆಸ್ತಿಯನ್ನು ಹಂಚಿಕೆ ಮಾಡಿ ನಾನು ನೆಮ್ಮದಿಯಿಂದ ಸಾಯುವಂತೆ ಅನುಗ್ರಹಿಸಬೇಕು' ಎಂದು ದೈನ್ಯದಿಂದ ಬೇಡಿಕೊಂಡರು. ನೂರಾರು ಎಕರೆ ಜಮೀನ್ದಾರರಾದ ಯಜಮಾನರ ಆಸ್ತಿಯನ್ನು ಹಂಚಿಕೆಮಾಡುವುದು ಅಷ್ಟು ಸುಲಭದ ಕಾರ್ಯವಾಗಿರಲಿಲ್ಲ. ಮಕ್ಕಳಿಗೆ ನೋಟೀಸ್ ಕಳುಹಿಸಿದೆವು. ಯಜಮಾನರ ಆಸ್ತಿಯನ್ನು ಬಲ್ಲ ಅವರ ಸಂಬಂಧಿಗಳಿಗೂ ನಿರೂಪ ಕಳುಹಿಸಿದೆವು. ವಿಚಾರಣೆಯ ದಿನ ಎಲ್ಲರೂ ಹಾಜರಾದರು. ಇಡೀ ದಿನವೆಲ್ಲಾ ಬೇರೆ ಕೇಸುಗಳ ವಿಚಾರಣೆ ಮುಗಿಸಿ ದಿನದ ಕೊನೆಯಲ್ಲಿ ಸಂಜೆ 6ಗಂಟೆಗೆ ಯಜಮಾನರ ಕೇಸನ್ನು ಕೂಗಿಸಿದೆವು. ಮಧ್ಯಸ್ಥರ ಸಮಕ್ಷಮ ಒಬ್ಬೊಬ್ಬರನ್ನೇ ಖಾಸಗಿಯಾಗಿ ಕೂರಿಸಿಕೊಂಡು ಏನೇನು ಆಸ್ತಿ ಇದೆ, ಯಾರ ಅಂತರಂಗ ಹೇಗಿದೆಯೆಂದು ತಿಳಿದುಕೊಂಡೆವು. ಅಷ್ಟು ಹೊತ್ತಿಗೆ ರಾತ್ರಿ 9.30 ಗಂಟೆ ಆಯಿತು. ಮಧ್ಯಸ್ಥರೊಂದಿಗೆ ಸಮಾಲೋಚನೆ ನಡೆಸಿ ನಂತರ ನ್ಯಾಯಪೀಠದಲ್ಲಿ ಕುಳಿತುಕೊಂಡು ಪಾಲು ಪಟ್ಟಿಯನ್ನು ಕರಣಿಕರಿಗೆ ಬರೆಸುತ್ತಾ ಹೋದೆವು. ತಂದೆತಾಯಿಗಳ ಜೀವನಾಂಶಕ್ಕೆ ಕೆಲವೊಂದು ಆಸ್ತಿಗಳನ್ನು ತೆಗೆದಿರಿಸಿ ಉಳಿದ ಎಲ್ಲಾ ಚರ, ಸ್ಥಿರ ಆಸ್ತಿಗಳನ್ನು ನಾಲ್ಕೂ ಜನ ಮಕ್ಕಳಿಗೆ ಸಮನಾಗಿ ಹಂಚಿಕೆಮಾಡಿದೆವು. ವಾಸಕ್ಕೆ ಪ್ರತಿಯೊಬ್ಬರಿಗೂ ಒಂದೊಂದು ಮನೆ ಬಂದಿತ್ತು. ಯಾರ ಮುಖದಲ್ಲೂ ಅತೃಪ್ತಿ ಕಾಣಿಸಲಿಲ್ಲ. ಹೀಗಾಗಿ ನಾವು ಮಾಡಿದ ಪಾಲುವಿಭಾಗ ಸರಿಯಾಗಿದೆಯೆಂದು ನಮಗೆ ಸಮಾಧಾನವಾಯಿತು. ಪೇಟೆಯಲ್ಲಿ ಒಂದು RCC ಮನೆ ಇತ್ತು. ಅದು ವಯಸ್ಸಾದ ತಂದೆತಾಯಿಗಳಿಗೆ

ಸೇರಬೇಕೆಂದೂ ಅವರ ಕಾಲಾನಂತರ ಎರಡನೆಯ ಮಗನಿಗೆ ಸಲ್ಲಬೇಕೆಂದು ಕೊನೆಯ ತೀರ್ಪು ಬರೆಸುತ್ತಿದ್ದಂತೆ ಅವನು ಮುಖ ಊದಿಸಿಕೊಂಡು ಗೊಣಗುತ್ತಾ ವಿರೋಧಪಕ್ಷದವರು ಅಸೆಂಬ್ಲಿಯನ್ನು boycott ಮಾಡುವಂತೆ ಆದರೆ ಅವರಂತೆ ಘೋಷಣೆ ಕೂಗದೆ ಗಂಭೀರವಾಗಿ ಹೊರ ನಡೆದನು. ಹಿಂದಿನಿಂದ ಜನರನ್ನು ಕಳುಹಿಸಿ ಅವನನ್ನು ವಾಪಾಸ್ ಕರೆಸಿದೆವು. ಅವನ ಮುಖ ಮತ್ತು ಕಣ್ಣುಗಳಲ್ಲಿ ಅಸಮಾಧಾನ ಎದ್ದುಕಾಣುತ್ತಿತ್ತು. 'ನಿನಗೆ ಏನು ಅನ್ಯಾಯವಾಗಿದೆ?' ಎಂದು ಕೇಳಿದೆವು. ಅದಕ್ಕೆ ಅವನು ಕೊಟ್ಟ ಉತ್ತರ: 'ನಮ್ಮಪ್ಪ ಇನ್ನೂ 20 ವರ್ಷ ಬದುಕುತ್ತಾನೆ; ಅಲ್ಲಿಯವರೆಗೆ ಆ ಮನೆಯನ್ನು ಪಡೆಯಲು ನಾನು ಕಾಯಬೇಕೇನು?' ಅವನ ದುರಾಸೆಯನ್ನು ಕಂಡು, ಹೆತ್ತ ತಂದೆತಾಯಿಗಳ ಬಗ್ಗೆ ಅವನಾಡಿದ ಬಿರುನುಡಿಗಳನ್ನು ಕೇಳಿ ಕೋಪಗೊಂಡು 'ನೀನು ಹುಟ್ಟಿದ ಮೇಲೆ ನಿಮ್ಮಪ್ಪ ಹುಟ್ಟಿದನೋ, ನಿಮ್ಮಪ್ಪ ಹುಟ್ಟಿದ ಮೇಲೆ ನೀನು ಹುಟ್ಟಿದೆಯೋ, ದುಡಿದು ಸಂಪಾದಿಸಿ ಮನೆ ಕಟ್ಟಿಸಿದವರು ಯಾರು, ನೀನೋ ನಿಮ್ಮಪ್ಪನೋ?' ಎಂದು ಛೀಮಾರಿ ಹಾಕಿದೆವು. 'ಪಾಲುವಿಭಾಗಕ್ಕೆ ಮರ್ಯಾದೆಯಿಂದ ರುಜು ಹಾಕು' ಎಂದು ಏರಿದ ದನಿಯಲ್ಲಿ ಗದರಿಸಿದೆವು. ಕುಲಗುರುಗಳೆಂದು ನಂಬಿಕೊಂಡು ಬಂದ ಮನೆತನದ ಸಂಸ್ಕಾರದಿಂದ ಕೊನೆಗೂ ಅವನು ರುಜುಹಾಕಿದ. ನಮಗೆ ಸಂತೋಷವಾಯಿತು. ಆದರೆ ಅದು ಬಹಳ ದಿನ ಉಳಿಯಲಿಲ್ಲ. ನಾವು ತೀರ್ಪು ನೀಡಿದ ಒಂದೇ ತಿಂಗಳೊಳಗೆ ಆ ಯಜಮಾನರು ತೀರಿಕೊಂಡರು. ನಾವು ಬೇಗನೆ ತೀರ್ಮಾನ ಮಾಡದಿದ್ದರೆ ಆ ಹಿರಿಯ ಜೀವ ಪಾಲುವಿಭಾಗವಾಗಿಲ್ಲವೆಂದು ಇನ್ನೂ ಕೆಲವು ದಿನ ಜೀವ ಹಿಡಿದುಕೊಂಡು ಇರುತ್ತಿತ್ತೋ ಏನೋ ಎಂದು ವೇದನೆ ಉಂಟಾಯಿತು. ಅವರ ಅಂತ್ಯಸಂಸ್ಕಾರಕ್ಕೆ ಹೋಗಿದ್ದೆವು. ಕಣ್ಣೀರು ಸುರಿಸುತ್ತಿದ್ದ ಅವರ ಹೆಂಡತಿ ಮಕ್ಕಳನ್ನು ಸಂತೈಸಿದೆವು. ಆದರೆ ಅವರ ಎರಡನೆಯ ಮಗ ಕೊನೆಗಾಲದಲ್ಲಿಯೂ ತನ್ನ ತಂದೆಯ ಮುಖವನ್ನು ನೋಡಲು ಬಂದಿರಲಿಲ್ಲ! 'ಕೀರ್ತಿಗೊಬ್ಬ ಮಗ, ಆರತಿಗೊಬ್ಬ ಮಗಳು' ಎನ್ನುವುದಕ್ಕಿಂತ 'ಆಸ್ತಿಗೊಬ್ಬ ಮಗ, ಆಸರೆಗೊಬ್ಬ ಮಗಳು' ಎಂದು ಹೇಳಬೇಕೆನಿಸಿತು! ಅದೂ ನಮ್ಮ ಭ್ರಮೆಯೆಂದು ಇನ್ನಿತರೆ ಪ್ರಕರಣಗಳಿಂದ ವೇದ್ಯವಾಗಿದೆ. ಹಾಗಾಗದಿರಲೆಂದೇ ನಮ್ಮ ಹಾರೈಕೆ!

**26.11.2008**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑